ಅದೇ ಮನಸ್ಥಿತಿಯಲ್ಲಿ ಆ ವರ್ಷದ ಪಟ್ಟಲದಮ್ಮನ ಜಾತ್ರೆಗೆ ಊರಿಗೆ ಬಂದಿದ್ದ ಲಕ್ಷ್ಮಿಗೆ ತನ್ನ ವಾರಗಿತ್ತಿಯ ಮೂರು ವರ್ಷದ ಮುದ್ದಾದ ಮಗಳು ಸುನಂದಾಳನ್ನು ಹಿಂದೆ ಸಾಕಷ್ಟು ಬಾರಿ ನೋಡಿದ್ದರೂ ಈ ಬಾರಿ ಗಮನವಿಟ್ಟು ನೋಡಿ ಮನದಲ್ಲಿ ಇದೇ ಮಗುವನ್ನು ಏಕೆ ತನ್ನ ಮಗುವನ್ನಾಗಿಸಿಕೊಳ್ಳಬಾರದು ಎಂಬ ಆಲೋಚನೆಯೊಂದು ಉದಯವಾಗಿ ಮನಸ್ಸು ಹರ್ಷದಿಂದ ಕುಣಿಯಲಾರಂಭಿಸಿತು. ವಾಪಸ್ಸು ಬೆಂಗಳೂರಿಗೆ ಬಂದ ಮೇಲೆ ತನ್ನ ಮನದ ಬಯಕೆಯನ್ನು ಗಂಡನೊಂದಿಗೆ ಹಂಚಿಕೊಂಡಳು. ಕೇಶವನಿಗೂ ತನ್ನ ಹೆಂಡತಿ ಹೇಳಿದ್ದು ಸರಿಯೆನಿಸಿತು. ತನ್ನ ಅಣ್ಣ ಬೇರೆಯಲ್ಲ, ನಾನು ಬೇರೆಯಲ್ಲ, ಅವನ ಮಕ್ಕಳು ನನಗೂ ಮಕ್ಕಳಿದ್ದಂತೆ ಎಂದು ಯೋಚಿಸಿ ಅಣ್ಣನ ಮೂರನೆಯ ಮಗಳನ್ನು ತಂದು ಸಾಕಿಕೊಂಡು ತಮ್ಮ ಬದುಕಿಗೊಂದು ಆಸರೆಯನ್ನು ಸೃಷ್ಟಿಸಿಕೊಳ್ಳಬೇಕೆಂದು ನಿರ್ಧರಿಸಿದವನು ತಡಮಾಡಲಿಲ್ಲ. ಮುಂದಿನ ಭಾನುವಾರ ತನ್ನ ಹೆಂಡತಿಯನ್ನು ಕರೆದುಕೊಂಡು ಊರಿಗೆ ಹೋಗಿ ತನ್ನ ಅಣ್ಣ ಮತ್ತು ಅತ್ತಿಗೆಯ ಸಮ್ಮುಖದಲ್ಲಿ ತನ್ನ ಮನದ ಇಂಗಿತವನ್ನು ಬಹಿರಂಗಪಡಿಸಿದ.

ಕೃಷ್ಣೇಗೌಡ, ಕೇಶವರ ತಂದೆ ತಿರುಮಲೇಗೌಡ ಚಿಕ್ಕಂದಿನಲ್ಲಿಯೇ ತೀರಿಹೋಗಿದ್ದ. ಇಬ್ಬರೂ ತಮ್ಮ ತಾಯಿ ಪುಟ್ಟಮ್ಮನ ಆಸರೆಯಲ್ಲಿಯೇ ಬೆಳೆದಿದ್ದರು. ಕೇಶವನ ಮದುವೆಯಾದ ಮೇಲೆ ಎರಡು ವರ್ಷಕ್ಕೆ ಅಸ್ತಮಾ ಕಾಯಿಲೆಯಿಂದ ಬಳಲುತ್ತಿದ್ದ ಪುಟ್ಟಮ್ಮನೂ ತೀರಿಹೋಗಿದ್ದಳು. ಅದಾದ ನಂತರ ಕೃಷ್ಣೇಗೌಡ ಊರಿನ ಹಿರಿಯರ ಸಮ್ಮುಖದಲ್ಲಿ ತಮ್ಮನಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಸರಿಯಾಗಿ ಅರ್ಧ ಪಾಲು ನೀಡಿ ತಾನೇ ನಿಂತು ಪಾರೀಖತ್ತು ಪಹಣಿ ಮಾಡಿಸಿ ಕೇಶವನ ಹೆಸರಿಗೆ ವರ್ಗಾಯಿಸಿದ್ದ. ಆನಂತರ ತಮ್ಮ ಬೆಂಗಳೂರಿನಲ್ಲಿ ಇದ್ದುದರಿಂದ ಆ ಆಸ್ತಿಯನ್ನು ತಾನೇ ಹಸನು ಮಾಡಿ ಉತ್ತು ಬಿತ್ತಿ ಬೆಳೆ ಬೆಳೆಯುತ್ತಿದ್ದ. ತನ್ನ ಜಮೀನಿನಲ್ಲಿ ಆದಾಯಕ್ಕಿಂತ ಖರ್ಚೇ ಹೆಚ್ಚು ಎಂದು ತಿಳಿದಿದ್ದ ಕೇಶವ ಅಂತಹ ಕಾಲ ಬಂದಾಗ ನೋಡಿಕೊಳ್ಳೋಣ ಎಂದು ಆಸ್ತಿಯ ಬಗ್ಗೆ ಯಾವುದೇ ಆಸಕ್ತಿ ತಳೆದಿರಲಿಲ್ಲ. ಖರ್ಚುವೆಚ್ಚಗಳನ್ನೂ ಕೊಡುತ್ತಿರಲಿಲ್ಲ ಮತ್ತು ಯಾವುದೇ ಆದಾಯವನ್ನೂ ನಿರೀಕ್ಷಿಸುತ್ತಿರಲಿಲ್ಲ. ಆದರೂ ಕೃಷ್ಣೇಗೌಡ ಆಗಾಗ ಬೆಳೆದ ಭತ್ತ, ರಾಗಿ, ತರಕಾರಿಗಳನ್ನೂ, ತೋಟದಲ್ಲಿನ ತೆಂಗಿನ ಕಾಯಿಗಳನ್ನು ಖಾಸಗಿ ಬಸ್ಸಿನಲ್ಲಿ ಹೇರಿಕೊಂಡು ಹೋಗಿ ತಮ್ಮನ ಮನೆಗೆ ಕೊಟ್ಟು ಬರುವುದನ್ನು ತಪ್ಪಿಸಿರಲಿಲ್ಲ. ಇದರಿಂದಾಗಿ ಅಣ್ಣತಮ್ಮಂದಿರ ಕುಟುಂಬಗಳು ಅನ್ಯೋನ್ಯವಾಗಿದ್ದವು.

ಮಕ್ಕಳಿಲ್ಲದ ತನ್ನ ತಮ್ಮ ಮೂರನೆಯ ಮಗಳನ್ನು ಕರೆದುಕೊಂಡು ಹೋಗಿ ಸಾಕಿಕೊಳ್ಳುತ್ತೇನೆ ಎಂದು ತಿಳಿಸಿದಾಗ ಕೃಷ್ಣೇಗೌಡನಿಗೆ ಅದರಲ್ಲಿ ಯಾವ ತಪ್ಪೂ ಕಾಣಿಸಲಿಲ್ಲ. ಆದರೆ, ತನ್ನ ಮಕ್ಕಳನ್ನು ಹೆತ್ತುಹೊತ್ತು ಸಾಕುತ್ತಿರುವ ಹೆಂಡತಿ ಏನನ್ನುತ್ತಾಳೋ ಎಂಬ ಅಂಜಿಕೆಯಿಂದ ನಿರ್ಧಾರ ತೆಗೆದುಕೊಳ್ಳಲಾಗದೇ ತನ್ನ ಹೆಂಡತಿಯ ಕಡೆ ನೋಡಿ 'ನಿಮ್ಮತ್ತಿಗೆ ಏನಂತಾಳೋ ಕೇಳಪ್ಪ...' ಎಂದು ಸಂಪಿಗಮ್ಮನಿಗೆ ಜವಾಬ್ದಾರಿ ವಹಿಸಿ ಸುಮ್ಮನೆ ಕುಳಿತುಕೊಂಡ. ಸಂಪಿಗಮ್ಮನಿಗೂ ತನ್ನ ಮೈದುನ ಕೇಳುತ್ತಿರುವುದರಲ್ಲಿ ತಪ್ಪೇನೂ ಇಲ್ಲ ಎನಿಸಿದರೂ ಎಷ್ಟು ಮಕ್ಕಳಿದ್ದರೂ ಎಲ್ಲವೂ ನನ್ನ ಮಕ್ಕಳೇ... ನನ್ನ ಮೂರನೆಯ ಮಗಳನ್ನು ಬಿಟ್ಟಿರುವುದು ಹೇಗೆ ಎಂಬ ಚಿಂತೆ ಅವಳನ್ನು ಕಾಡತೊಡಗಿತು. ಒಡನೆಯೇ ನನ್ನ ಮೈದುನನ ಮನೆಯೂ ನನ್ನ ಮನೆಯೇ, ನನ್ನ ಮಗಳು ಅಲ್ಲಿದ್ದರೂ ನನ್ನ ಮನೆಯಲ್ಲಿದ್ದಂತೆ, ಎಲ್ಲೋ ಒಂದು ಕಡೆ ಸುಖವಾಗಿ ಬೆಳೆದುಕೊಳ್ಳಲಿ ಎಂಬ ಉದಾರ ಭಾವದಿಂದ ಸುನಂದಾಳನ್ನು ಬೆಂಗಳೂರಿಗೆ